**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ,**
**ದಾವಣಗೆರೆ.**

S.C.No.165/2022

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಕೆಟಿಜೆ ನಗರ ಪೊಲೀಸ್ ಠಾಣೆ, ದಾವಣಗೆರೆ | | ಎ 1) ರಾಜು ತಂದೆ ವೆಂಕಟೇಶ ಮತ್ತು ಇನ್ನೊಬ್ಬರು |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎಸ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ ;-

ಆರೋಪಿತರಾದ - ಎ 1) ರಾಜು ತಂದೆ ವೆಂಕಟೇಶ, ವಯಸ್ಸು 28 ವರ್ಷ, ವಾಸಃ ದಾವಣಗೆರೆ.

ಎ 2) ಪೃಥ್ವಿ ತಂದೆ ರಾಮನಾಯ್ಕ, ವಯಸ್ಸು 20 ವರ್ಷ, ವಾಸಃ ಬೆಂಕಿನಗರ, ಪಾಮೇನಹಳ್ಳಿ, ದಾವಣಗೆರೆ

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, 1 ನೇ ಆರೋಪಿಯಾದ ನೀನು ಸಾಕ್ಷಿ-14 ಜಯಶ್ರೀ ಎಂಬುವವರನ್ನು ಪ್ರೀತಿಸುತ್ತಿದ್ದು, ನಂತರ ನೀನು ಬಹಳಷ್ಟು ಮದ್ಯವ್ಯಸನ ಮಾಡುವುದಲ್ಲದೇ, ಆಕೆಯ ಜೊತೆ ಅಸಭ್ಯವಾಗಿ ವರ್ತಿಸಿದ ಕಾರಣ ಆಕೆಯು ನಿನ್ನನ್ನು ಬಿಟ್ಟು ಸಾಕ್ಷಿ-1 ನೇಯವರನ್ನು ಪ್ರೀತಿಸುತ್ತಿದ್ದು, ಆ ವಿಚಾರ ನಿನಗೆ ತಿಳಿದು ಸಾಕ್ಷಿ -1 ರವರ ಮನೆಯ ಹತ್ತಿರ ಹೋಗಿ ಹೊಡೆಯುತ್ತೇನೆ ಎಂದು ಬೆದರಿಸಿದ್ದು, ತದನಂತರವೂ ಸಾಕ್ಷಿ-1 ರವರು ಸಾಕ್ಷಿ-14 ರವರನ್ನು ಪ್ರೀತಿಸುತ್ತಿರುವುದನ್ನು ಗಮನಿಸಿ ನೀನು ಆ ವಿಷಯವನ್ನು 2 ನೇ ಆರೋಪಿತನಾದ ನಿನಗೆ ತಿಳಿಸಿದ್ದು, ನಂತರ ನೀವಿಬ್ಬರೂ ಸೇರಿಕೊಂಡು ಸಾಕ್ಷಿ-1 ನೇಯವರನ್ನು ಕೊಲೆ ಮಾಡೋಣ ಎಂದು ತೀರ್ಮಾನಿಸಿಕೊಂಡು ಬೈಕ್ ನಂ.ಕೆಎ-17-ಹೆಚ್ ಎಪ್ -2481 ರಲ್ಲಿ ಹೋಗಿ ಸಾಕ್ಷಿ-13 ರವರ ಅಂಗಡಿಯಲ್ಲಿ ಚಾಕುವನ್ನು ಖರೀದಿಸಿ, ಸಾಕ್ಷಿ-1 ರವರು ಪ್ರತಿದಿನ ಊಟಕ್ಕೆ ಹೋಗುವ ದಾರಿಯಾದ ತ್ರಿಶೂಲ್ ರಸ್ತೆಯ ಬಳಿ 2-00 ಗಂಟೆ ಸಮಯದಲ್ಲಿ ಕಾಯುತ್ತ ನಿಂತಿದ್ದು, ನಂತರ ಸಾಕ್ಷಿ-1 ರವರು ಸ್ಕೂಟರ್ ನಲ್ಲಿ ಬರುವಾಗ ಅವರನ್ನು ತಡೆದು ನಿಲ್ಲಿಸಿದ್ದು, ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ.341 ಜೊತೆ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ.

2. ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವಿಬ್ಬರು ಕೊಲೆ ಮಾಡುವ ಉದ್ದೇಶದಿಂದ ನಿಮ್ಮಲ್ಲಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ಸಾಕ್ಷಿ-14 ರವರನ್ನು ಪ್ರೀತಿಸಬೇಡ ಎಂದು ಎಷ್ಟು ಬಾರಿ ಹೇಳಬೇಕು ಎಂದು ಕೇಳಿದಾಗ, ಸಾಕ್ಷಿ-1 ರವರು ತಾನು ಸಾಕ್ಷಿ-14 ರವರನ್ನು ಪ್ರೀತಿಸುತ್ತೇನೆ ಬಿಡುವುದಿಲ್ಲ ಎಂದು ಹೇಳಿದಾಗ ನಿಮ್ಮಲ್ಲಿ 1 ನೇ

ಆರೋಪಿಯಾದ ನೀನು ಸುಮ್ಮನೆ ಬಿಡುವುದಿಲ್ಲ, ಸಾಯಿಸುತ್ತೇನೆ ಎಂದು ಧಮಕಿ ಹಾಕುತ್ತ, ನಿಮ್ಮಲ್ಲಿ 2 ನೇ ಆರೋಪಿಯಾದ ನೀನು ಸಾಕ್ಷಿ-1 ರವರ ಹಿಂಬದಿಗೆ ಹೋಗಿ ಅವರ ಕೈಗಳನ್ನು ಹಿಡಿದುಕೊಂಡಾಗ 1 ನೇ ಆರೋಪಿಯಾದ ನೀನು ಖರೀದಿಸಿ ತಂದಿದ್ದ ಚಾಕುವಿನಿಂದ ಕೊಲೆ ಮಾಡುವ ಉದ್ದೇಶದಿಂದ ಬೆನ್ನಿಗೆ, ಮೊಣಕೈ ಹಾಗೂ ತೋಳಿನ ಹತ್ತಿರ ಚುಚ್ಚಿದ್ದು, ಒಂದಾನುವೇಳೆ ಸಾಕ್ಷಿ-1 ರವರು ಸದರಿ ಗಾಯಗಳಿಂದ ತೀರಿಹೋಗಿದ್ದರೆ ಕೊಲೆ ಪ್ರಕರಣದಲ್ಲಿ ಆಗಬಹುದಾದ ಶಿಕ್ಷೆಯ ಸ್ವರೂಪಕ್ಕೆ ಅನುಗುಣವಾಗಿ ಶಿಕ್ಷಾರ್ಹ ಅಪರಾಧ ಮಾಡಿದ್ದು, ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ.307 ಜೊತೆ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ.

3. ಮೂರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವಿಬ್ಬರು ಸಾಕ್ಷಿ-1 ರವರು ಕೂಗಿಕೊಂಡಾಗ ಜನರು ಬರುವುದನ್ನು ನೋಡಿ ಇಷ್ಟಕ್ಕೆ ಬಿಡುವುದಿಲ್ಲ ಅಂತಾ ಪ್ರಾಣ ಬೆದರಿಕೆಯನ್ನು ಹಾಕಿದ್ದು, ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ.506 ಜೊತೆ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ಇಂದು 23 ನೇ ತಾರೀಖು ಮೇ ಮಾಹೆ 2024

**(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತ ರಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು)**

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.</u>

S.C.No.165/2022

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
| --- | --- | --- |
| ರಾಜ್ಯದ ಪರವಾಗಿ ಕೆಟಿಜೆ ನಗರ ಪೊಲೀಸ್ ಠಾಣೆ, ದಾವಣಗೆರೆ | | ಎ 1) ರಾಜು ತಂದೆ ವೆಂಕಟೇಶ ಮತ್ತು ಇನ್ನೊಬ್ಬರು |

<u>ಆರೋಪಿಯ ಹೇಳಿಕೆ</u>

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

ದಿನಾಂಕ.23-05-2024

| ಆರೋಪಿತರ ಹೆಸರು | ಆರೋಪಿತರ ಸಹಿ |
| --- | --- |
| ಎ 1) ರಾಜು ತಂದೆ ವೆಂಕಟೇಶ,<br>ವಯಸ್ಸು 28 ವರ್ಷ, | |
| ಎ 2) ಪೃಥ್ವಿ ತಂದೆ ರಾಮನಾಯ್ಕ,<br>ವಯಸ್ಸು 20 ವರ್ಷ, | |